ವಿಷಯ ಬೆಂಗಳೂರು ಕಚೇರಿಯಲ್ಲಿ ಬೆರಳಚ್ಚುಗಾರರು, ಕಂಪ್ಯೂಟರ್ ದಾರರನ್ನು ತೆರೆವು ಮಾಡಿಸುವ ಕುರಿತು –

ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) – ಮಾನ್ಯ ಅಧ್ಯಕ್ಷರೇ, ಬೆಂಗಳೂರಿನಲ್ಲಿರುವ ತಾಲ್ಲೂಕು ಕಚೇರಿಯಲ್ಲಿ, ಆ ತಾಲ್ಲೂಕು ಕಚೇರಿ ಪ್ರಾರಂಭವಾದ ದಿನದಿಂದಲೂ ಅಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೆರಳಚ್ಚುಗಾರರು ಮತ್ತು ಕಂಪ್ಯೂಟರ್ ಆಪರೇಟರ್ ಗಳೇನಿದ್ದಾರೆ, ಅವರೆಲ್ಲರೂ ಖಾಲಿ ಮಾಡಬೇಕೆಮದು ಜಿಲ್ಲಾಧಿಕಾರಿಗಳು ಆದೇಶ ಮಾಡಿದ್ದಾರೆಂದು ತಿಳಿದು ಬಂದಿದೆ ಈಗ ಅಲ್ಲಿರತಕ್ಕಂಥ ಜನರು ಬಹುಶಃ ಕಳೆದ ಐವತ್ತು ವರ್ಷಗಳಿಂದಲೂ ಕೆಲಸ ಮಾಡಿಕೊಂಡು ಬಂದವರಾಗಿದ್ದಾರೆ ಮತ್ತು ಈಗಾಗಲೇ ಸರ್ಕಾರ ಕೂಡ ಅವರಿಗೆ ತಿಂಗಳಿಗೆ ೩೦೦ ರೂಪಾಯಿಗಳಂತೆ ಅವರುಗಳಿಂದ ಬಾಡಿಗೆ ತೆಗೆದುಕೊಳ್ಳುತ್ತಿದ್ದಾರೆ ಇವರುಗಳಿಂದ ಸಾಕಷ್ಟು ಸೇವೆ ಆಗುತ್ತಿದೆ ಏಕೆಂದರೆ, ಆ ತಾಲ್ಲೂಕು ಕಚೇರಿಗೆ ಬರತಕ್ಕಂಥ ಅನೇಕ ಬಡ ಜನರು ಇರಬಹುದು ಅವಿದ್ಯಾವಂತರು ಇರಬಹುದು, ಅಂಗವಿಕಲರು ಇರಬಹುದು, ಅವರೆಲ್ಲರ ಅರ್ಜಿಗಳನ್ನು ಟೈಪ್ ಮಾಡತಕ್ಕಂಥಾದ್ದು, ಛಾಪಾ ಕಾಗದಗಳಿರಬಹುದು, ನಮೂನೆಗಳಿರಬಹುದು, ಎಲ್ಲ ಕೆಲಸಗಳನ್ನೂ ಅವರುಗಳು ಮಾಡುತ್ತಾರೆ ಆದರೆ ಹೊಸದಾಗಿ ಕಂದಾಯ ಭವನ ನಿರ್ಮಿಸುತ್ತಿರುವದಿಂದ ಇವರನ್ನು ಏಕಾಏಕಿ ತೆಗೆದುಹಾಕಬೇಕೆಂಬ ಒಂದು ಆದೇಶ ಮಾಡಿದ್ದಾಖುಎ ಈ ರೀತಿಯಾಗಿ ಅವರುಗಳನ್ನು 'ದಿಢೀರ್' ಎಂದು ತೆಗೆದುಹಾಕಿದರೆ, ಅವರುಗಳು ಎಲ್ಲಿಗೆ ಹೋಗಬೇಕು? ಇದರಿಂದ ಅವರುಗಳು ಕಂಗಾಲಾಗಿದ್ದಾರೆ ಮತ್ತು ಹೊಸದಾಗಿ ಕಂದಾಯ ಭವನ ಬರುತ್ತಿರುವ ಜಾಗದಲ್ಲಿ, ಇಲ್ಲವೇ ಅವರುಗಳಿಗೆ ಪರ್ಯಾಯ ವ್ಯವಸ್ಥೆ ಮಾಡುವ ಪ್ರಯತ್ನ ಮಾಡಬೇಕು ಏಕೆಂದರೆ, ಅವರಿಂದ ಜನರಿಗೆ ಸಾಕಷ್ಟು ಅನುಕೂಲತೆಗಳಿವೆ ಇವತ್ತು ಅಲ್ಲಿಗೆ ಬಹಳ ದೂರದ ಪ್ರದೇಶಗಳಿಂದ ಬರುತ್ತಾರೆ ಯಾವುದೋ ಅರ್ಜಿಗಳಿರಬಹುದು, ನಮೂನಿಎಗಳಿರಬಹದುಉ, ಛಾಪಾ ಕಾಗದ ಇರಬಹುದು, ಏನೇ ಒಂದು ಟೈಪ್ ಮಾಡಿಸಿಕೊಳ್ಳಬೇಕಾದರೆ, ಇವರ ಹತ್ತಿರವೇ ಹೋಗುತ್ತಾರೆ ಮತ್ತು

ಸರ್ಕಾರಿ ಘಾರಂಗಳಲ್ಲಿ ಭರ್ತಿ ಮಾಡುವುದು ಕಷ್ಟದ ಕೆಲಸ ಇದನ್ನು ಭರ್ತಿ ಮಾಡುವುದಕ್ಕೂ ಅವರು ಸಹಾಯ ಮಾಡುತ್ತಾರೆ ಇಷ್ಟೆಲ್ಲಾ ಇರಬೇಕಾದರೆ, ನನಗೆ ಗೊತ್ತಿರುವಂತೆ ಅಲ್ಲಿ ೧೭೦ ಮಳಿಗೆಗಳಿದ್ದು, ಅವರೆಲ್ಲರೂ ಬಾಡಿಗೆ ಕಟ್ಟುತ್ತಿದ್ದಾರೆ, ಮತ್ತು ಅವರೆಲ್ಲರೂ ಬಹಳಷ್ಟು ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿದ್ದಾರೆ ನನ್ನ ಒತ್ತಾಯವೇನೆಂದರೆ, ದಯವಿಟ್ಟು ಅವರುಗಳಿಗೆ ತಾವು ರಕ್ಷಣೆ ಕೊಡಬೇಕು ಅವರ ಸೇವೆ ಕೂಡ ಅಗತ್ಯವಿದೆ ಹೊಸದಾಗಿ ಕಂದಾಯ ಭವನ ಆಗುತ್ತಿರುವ ಜಾಗದಲ್ಲಿ ಅವರುಗಳಿಗೆ ಸ್ಥಳಾವಕಾಶ ಮಾಡಿಕೊಡಬೇಕು ಅಲ್ಲಿಯವರೆಗೂ ಬೇರೆ ವ್ಯವಸ್ಥೆ ಒದಗಿಸಿಕೊಡಬೇಕು ಏಕೆಂದರೆ, ಈಗ ತಾವು ಹೊಸ ಕಟ್ಟಡ ಕಟ್ಟುತ್ತಿದ್ದೀರಿ, ರಕ್ಷಣೆ ಕೊಡತಕ್ಕಂಥ ಕೆಲಸವನ್ನು ತಾವು ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ

ಶ್ರೀ ಜಗದೀಶ್ ಶೆಟ್ಟರ್ ಮಾನ್ಯ ಅಧ್ಯಕ್ಷರೆ, stamp venders ಮತ್ತು ಇತರೆ ಮಳಿಗೆಗಳವರ ಬಗ್ಗೆ ಹೇಳುವುದಾದರೆ, ನಾವು ಹೊಸದಾಗಿ ಕಂದಾಯ ಭವನ ಕಟ್ಟುತ್ತಿದ್ದೇವೆ ಇವತ್ತು ಸದರಿ ಭವನ ಕಟ್ಟಿಸುತ್ತಿರುವ ಪರಿಸ್ಥಿತಿಯಲ್ಲಿ ಅವರುಗಳನ್ನು ಅನಿವಾರ್ಯವಾಗಿ ಬೇರೆ ಕಡೆಗೆ ಸ್ಥಳಾಂತರಿಸುತ್ತಿರುವುದು ನಡೆಯುತ್ತಿದೆ ಹಿಂದೆ ೨೦೦೬ನೇ ಇಸವಿಯಲ್ಲಿ ಕಂದಾಯ ಇಲಾಖೆಯಿಂದ ride ಮಾಡಿದಾಗ ೧೫ ಮಳಿಗೆಗಳಲ್ಲಿ ಬೋಗಸ್ ಜಾತಿ ಪ್ರಮಾಣ ಪತ್ರಗಳು, ಆದಾಯ ಪ್ರಮಾಣ ಪತ್ರಗಳು, ಇವೆಲ್ಲವೂ ಕೆಲವು ವ್ಯಕ್ತಿಗಳಲ್ಲಿ ಸಿಕ್ಕಿದವು ಅಂತಹವರ ಮೇಲೆ ಈಗಾಗಲೇ criminal cases ಹಾಕಲಾಗಿದೆ ಮತ್ತು ಉಳಿದವರೇನಿದ್ದಾರೆ, ಅವರುಗಳಿಗೆ ತೊಂದರೆಯಾಗದ ರೀತಿಯಲ್ಲಿ ಕಂದಾಯ ಭವನದ ಕೆಲಸ ಪೂರ್ಣಗೊಳ್ಳುವವರೆಗೆ ತೊಂದರೆಯಾಗದ ರೀತಿಯಲ್ಲಿ ಏನು ಕ್ರಮ ಕೈಗೊಳ್ಳಬೇಕೆಂಬುದನ್ನು ಸರ್ಕಾರದವರಾದ ನಾವು ಆಲೋಚನೆ ಮಾಡುತ್ತಿದ್ದೇವೆ ಇನ್ನೊಂದು, ಹೊಸದಾಗಿ ಕಂದಾಯ ಭವನವಾದ ನಂತರ ಪ್ರತ್ಯೇಕವಾಗಿ ಅಲ್ಲಿ ಏನು ಸ್ಥಳಾವಕಾಶ ಮಾಡಿಕೊಡಬೇಕೆನ್ನುವಂಥಾದ್ದರ ಬಗ್ಗೆಯೂ ನಾವು ಚಿಂತನೆ

ಮಾಡುತ್ತಿದ್ದೇವೆ ಈಗ ಅವರುಗಳಿಗೆ ಯಾವುದೇ ರೀತಿಯಲ್ಲೂ ತೊಂದರೆಯಾಗದಂತೆ ಸರ್ಕಾರ ನೋಡಿಕೊಂಡು ಹೋಗುತ್ತದೆ

ಶ್ರೀ ದಿನೇಶ್ ಗುಂಡೂರಾವ್ ಯಾರು ತಪ್ಪು ಮಾಡುತ್ತಿದ್ದಾರೋ, ಅವರ ವಿರುದ್ಧ ನೀವು ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಿ ಇದರ ಬಗ್ಗೆ ನಾವ್ಯಾರೂ ಕೂಡ ಶಿಫಾರಸ್ಸು ಮಾಡುವಂತಹವರಲ್ಲ, ಅದರ ಜೊತೆಗೆ ಈಗ ನೀವು ಆಶ್ವಾಸನೆ ಕೊಡಬೇಕಾಗಿರುವುದೇನೆಂದರೆ, ನಾವು ಚಿಂತನೆ ಮಾಡುತ್ತಿದ್ದೇವೆಂದು ಈಗ ನೀವು ಹೇಳಿದಿರಿ ಚಿಂತನೆ ಬೇಡ, ಏಕೆಂದರೆ ಅವರುಗಳು ಕೂಡ ಸಾಕಷ್ಟು ಅತ್ಯವಾದ ಸೇವೆಗಳನ್ನು ಮಾಡುತ್ತಿದ್ದಾರೆ ನೀವು ಆಶ್ವಾಸನೆ ಕೊಡಿ "ಮುಂದೆ ಯಾವ ಜಾಗದಲ್ಲಿ ಕಂದಾಯ ಭವನ ನಿರ್ಮಾಣ ಮಾಡುತ್ತಿದ್ದೇವೋ, ಅಲ್ಲಿ ನಿಮಗೆ ಜಾಗ ಮಾಡಿಕೊಡುತ್ತೇವೆ ಅಲ್ಲಿಯವರೆಗೆ ನಿಮಗೆಲ್ಲರಿಗೂ ಪರ್ಯಾಯ ವ್ಯವಸ್ಥೆ ಮಾಡಿಕೊಡುತ್ತೇವೆ" ಎಂದು ಮಾನ್ಯ ಸಚಿವರು ಆಶ್ವಾಸನೆ ಕೊಡಬಬಹುದು ಇದೇನೂ ದೊಡ್ಡ ವಿಚಾರವೇನಲ್ಲ ಯಾರು ತಪ್ಪು ಮಾಡುತ್ತಾರೋ, ಅವರ ವಿರುದ್ಧ ಕ್ರಮ ಕೈಗೊಳ್ಳಿ

ಶ್ರೀ ಜಗದೀಶ್ ಶೆಟ್ಟರ್ ಅಲ್ಲಿ ಜಾಗವಿಲ್ಲ ಒಂದು ಸಲ ಅಲ್ಲಿ building construction ಚಾಲೂ ಮಾಡಿದ ನಂರ ಆಗ ಏನು ಮಾಡುವುದಕ್ಕಾಗುತ್ತದೆಂದು ನೀವೇ ಹೇಳಿ ಹೀಗಾಗಿ, ಅಲ್ಲಿಯೇ ಪರ್ಯಾಯ ವ್ಯವಸ್ಥೆ ಮಾಡಬೇಕೆಂದರೆ, ಬಹಳ ತೊಂದರೆಯಾಗುತ್ತದೆ ಮತ್ತು ಅಕ್ಕಪಕ್ಕಗಳಲ್ಲಿಯೂ ಏನಾದರೂ ವ್ಯವಸ್ಥೆ

ಶ್ರೀ ದಿನೇಶ್ ಗುಂಡೂರಾವ್ ಹೊಸ ಕಂದಾಯ ಭವನ ನಿರ್ಮಾಣವಾದಾಗ ಮಾಡಿಕೊಡುತ್ತೇವೆಂದು ನೀವು ಆಶ್ವಾಸನೆ ಕೊಟ್ಟರೆ

ಶ್ರೀ ಜಗದೀಶ್ ಶೆಟ್ಟರ್ ಈಗ ಹೊಸದಾಗಿ ಕಂದಾಯ ಭವನ ಅದನಮತರ ಅವರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಿಕೊಡುತ್ತೇವೆಂದು ನಾವು ಹೇಳುತ್ತಿದ್ದೇವೆ

ಶ್ರೀ ದಿನೇಶ್ ಕುಂಡೂರಾವ್ ಆಯಿತು

ವಿಷಯ (ಉ) ಮರಗಳನ್ನು ಕಡಿಯಲು ಅಮುಮತಿಗಾಗಿ ಕಂದಾಯ ಇಲಾಖೆಯವರು ನೀಡುವ Workship Certificate ಬಗ್ಗೆ

ಶ್ರೀ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ರೈತರು ತಂತಮ್ಮ ಜಮೀನಿನಲ್ಲಿ ಮರಮುಟ್ಟು ಬೆಳೆದಿರುತ್ತಾರೆ ಕೆಲವರು ಅಕೇಶಿಯಾ ಹಾಗೂ ಮರಮುಟ್ಟು ಬೆಳೆಸಿರುತ್ತಾರೆ ಅದರ cutting permissionಗೆ ಗೆ Forest Department ಹೋಗಬೇಕು ಆದರೆ, Forest Department ನವರು cutting ಗೆ permission ಕೊಡುವುದಕ್ಕೆ Revenue Department ನವರು Ownership Certificate ಕೊಡಬೇಕು ನಮ್ಮ ಜಇಲ್ಲಾಧಿಕಾರಿಗಳು Ownership Certificate ಕೊಡಬಾರದೆಂದು ಎಲ್ಲರಿಗೂ ಆದೇಶ ಮಾಡಿದ್ದಾರಂತೆ Cutting permission ಕೊಡುವುದು ಬಿಡುವುದು Foiest Department ಆದರೆ Owner ಹೌದೋ ಅಲ್ಲವೋ ಎಂದು ಇವರು certificate ಕೊಡದೇ ಇರುವಂಧದ್ದು ತಪ್ಪಾಗುತ್ತದೆ ಅದಕ್ಕೋಸ್ಕರ, ಮಾನ್ಯ ಕಂದಾಯ ಸಚಿವರನ್ನು ಕೇಳಿಕೊಳ್ಳುತ್ತೇನೆ ತಾವು ಆದೇಶ ಮಾಡಿಸಬೇಕು Ownership Certificate ಕೊಡಲಿ, ಉಳಿದಿದ್ದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಿ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಜಯಪ್ರಕಾಶ್ ಹೆಗ್ಡೆಯವರು ಏನು ವಿಷಯ ಪ್ರಸ್ತಾಪಿಸಿದ್ದಾರೆ, ಅದರಲ್ಲಿ ಉಡುಪಿ ಜಿಲ್ಲೆಯಲ್ಲಿ ಖಾಸಗಿ ಜಮೀನಿನಲ್ಲಿರುವ ಮರ–ಮುಟ್ಟುಗಳ ಒಡೆತನದ ಬಗ್ಗೆ ಮಾಲೀಕರುಗಳಿಎ ಕಂದಾಯ ಇಲಾಖೆಯವರು Non Objection Certificate ಕೊಡುವ ಬಗ್ಗೆ ನನಗನಿಸುವ ಮಟ್ಟಿಗೆ ಇದಕ್ಕೇನೂ ತೊಂದರೆಯಿಲ್ಲ ಏಕೆಂದರೆ,